1999ರಲ್ಲಿ; ಮುಗಿದದ್ದು 2009ರಲ್ಲಿ! ಕತೆಯೊಂದು ಪ್ರಕಟವಾದ ಮೇಲೆ, ಅದು 'ಮುಗಿದಿದೆ' ಎಂಬುದು ನನ್ನ ನಂಬಿಕೆ. ನನ್ನ ಕೆಲವು ಕತೆಗಳು ಬರೆಯಲು ಶುರುವಾದ ಎಷ್ಟೋ ವರ್ಷಗಳ ನಂತರ ಮುಗಿದಂತಿವೆ. ಬರೆಯುತ್ತಿರುವಾಗ, ಯಾವುದೋ ಘಟ್ಟದಲ್ಲಿ 'ಇದು ಇಷ್ಟೇ' ಎಂದು ಕತೆ ನಿಲ್ಲುತ್ತದೆ; ನಂತರ ಏನೋ ಒಂದು ಸೇರಿಕೊಳ್ಳುತ್ತದೆ; ಇನ್ನಾವುದೋ ಪಾತ್ರ ಕತೆಯ ಪಾತ್ರದೊಳಕ್ಕೆ ಸೇರಿಕೊಳ್ಳುತ್ತದೆ. ಒಮ್ಮೆ ಲಘುವಾಗಿದ್ದ ನಿರೂಪಣೆ ಮುಂದೆ ಗಂಭೀರವಾಗುತ್ತದೆ. ಈ ವರ್ಷ ಪರಿಣಾಮಕಾರಿಯಾಗಿ ಕಂಡ ಭಾಗ ಮುಂದಿನ ವರ್ಷ ಕೊಂಚ 'ಸೆಂಟಿಮೆಂಟಲ್' ಅನ್ನಿಸಿ, ನನ್ನ ಕತೆಯೇ ಅದನ್ನು ತಿರಸ್ಕರಿಸುತ್ತದೆ... ಆಮೇಲೆ ಕೊನೆಯ ಘಟ್ಟದ ತಿದ್ದುವಿಕೆ...

ನನ್ನನ್ನು ಕೇಳಿದರೆ, ಈ ಥರದ ದೀರ್ಘ ಪ್ರಕ್ರಿಯೆ ಸಣ್ಣ ಕತೆ ಬರೆಯುವವರಿಗೆ ಅಂಥ 'ಆದರ್ಶ' ಮಾದರಿಯಲ್ಲ! ಆದರೆ, ಇನ್ನಿತರ ಗದ್ಯ ಬರವಣಿಗೆಗಳನ್ನು ಸಾಕಷ್ಟು ವೇಗವಾಗಿ ನಿರ್ವಹಿಸುವ ನನಗೆ, ಕತೆ, ಕವಿತೆ, ನಾಟಕ, ಕಾದಂಬರಿ ಮೊದಲಾದವುಗಳನ್ನು ನಿಜಕ್ಕೂ ನಾನು ಕಂಡ, ಹುಡುಕಿಕೊಂಡ ಸತ್ಯಕ್ಕೆ ಹತ್ತಿರವಾಗಿ ಬರೆಯಬೇಕೆಂಬ ಒಳಾಸೆಯಿರುತ್ತದೆ. ನಾಚಿಕೆ ಬಿಟ್ಟು ಹೇಳುವುದಾದರೆ, ನಾನು ನನ್ನದೇ ಆದ ಸೀಮಿತ ಅರ್ಥದಲ್ಲಿ 'ಪರ್ಫೆಕ್ಷನಿಸ್ಟ್' ಇರಬಹುದೇನೋ! ಎಷ್ಟು ವರ್ಷವಾದರೂ ಆಗಲಿ, ಕತೆಯೊಂದನ್ನು ತಂತಾನೇ ಬೆಳೆಯಗೊಡಬೇಕೆಂದು ನನ್ನ 'ಸತ್ಯಪ್ರಜ್ಞೆ' ನನ್ನನ್ನು ಒತ್ತಾಯಿಸುತ್ತಿರುತ್ತದೆ. ಒಮ್ಮೆ ನಾನು ನನ್ನ ಬರವಣಿಗೆಯ ಈ ವಿಧಾನವನ್ನು ಕುರಿತು ಹೇಳಿದಾಗ ಲಂಕೇಶರು, 'ಅಯ್ಯೋ! ಹಂಗೆ ಬರೆದರೆ ನಂಗೆ ಬರೆಯೋಕೇ ಆಗಲ್ಲ!' ಅಂದರು. ಆದರೆ ಅವರೇ ತಮ್ಮ ನವ್ಯ ಘಟ್ಟದಲ್ಲಿ ತಾನು ಒಂದು ಕತೆಯನ್ನು ಮೂರು ಸಲ ಬರೆಯುತ್ತೇನೆಂದು ಬರೆದಿದ್ದರು. ಅದು ನನ್ನ ತಲೆಯಲ್ಲಿ ಬಹು ಕಾಲ ಉಳಿದಿತ್ತು. ಹಾಗೆ ನೋಡಿದರೆ, ಕೇವಲ ಕತೆಯನ್ನಷ್ಟೇ ಅಲ್ಲ, ಇನ್ನಾವುದೇ ಪ್ರಕಾರದಲ್ಲಿ ಪೂರ್ಣಗೊಂಡ ಬರಹಗಳನ್ನು ಕೂಡ ಪುಸ್ತಕ ರೂಪದಲ್ಲಿ ಪ್ರಕಟಿಸಲು ನಾನು ಐದರಿಂದ ಹತ್ತು ವರ್ಷ ತೆಗೆದುಕೊಂಡಂತೆ ಕಾಣುತ್ತದೆ!

● ಬರೆದ ಬಳಿಕ ಓದುಗರಿಂದ, ಸ್ವತಃ ನಿಮ್ಮ ಕತೆಯಿಂದ ಏನನ್ನು ನಿರೀಕ್ಷಿಸುತ್ತೀರಿ?

ಒಂದು ಕತೆಯಲ್ಲಿ ಎಲ್ಲೋ ನಾನು ಹಿಡಿಯಲೆತ್ನಿಸಿದ ಸತ್ಯವನ್ನು, ಸೂಕ್ಷ್ಮಗಳನ್ನು ಓದುಗರೂ ಹಿಡಿದದ್ದನ್ನು ಕಂಡಾಗ ಪುಳಕಗೊಳ್ಳುತ್ತೇನೆ. ಓದುಗರು, ವಿಮರ್ಶಕರು ಗಂಭೀರವಾಗಿ ಕತೆಯನ್ನು ಓದಿ, ನಾನು ಗ್ರಹಿಸಿದ್ದಕ್ಕಿಂತ ಭಿನ್ನವಾದ ಸತ್ಯವನ್ನು ತೋರಿಸಿದರೆ ಕೃತಜ್ಞನಾಗುತ್ತೇನೆ. ನನ್ನ ಯಾವ ಕತೆಯಲ್ಲಿ ಯಾರಿಗೆ ಕ್ರಾಸ್ ರೆಫರೆನ್ಸುಗಳಿವೆ ಎಂಬುದನ್ನು ಮಿತ್ರರು ಅಕಸ್ಮಾತ್ ಊಹಿಸಿದರೆ ಖುಷಿಯಾಗುತ್ತೇನೆ. ಓದುಗರು ತಂತಮ್ಮ ಭಾವಕ್ಕೆ ತಕ್ಕಂತೆ ಕತೆ ಓದಿದಾಗ ಚಕಿತನಾಗುತ್ತೇನೆ. ಎಲ್ಲ ಲೇಖಕರಂತೆ ನನ್ನ ಬರವಣಿಗೆಗೆ ಓದುಗರ ಸಮ್ಮತಿ ಪಡೆಯುವ ಬಯಕೆ ಹಾಗೂ ನಿರೀಕ್ಷೆ ನನ್ನಲ್ಲೂ ಇರುತ್ತದೆ. ನಾನೇ ಒಬ್ಬ ಓದುಗನಾಗಿ ಅದನ್ನು ಓದಿದಾಗ ಅದು ಸತ್ಯವಾಗಿದೆಯೇ ಇಲ್ಲವೇ ಎಂಬುದನ್ನು ನೋಡುತ್ತೇನೆ. ಅದು 'ಕನ್ವಿನ್ಸಿಂಗ್' ಆಗಿಲ್ಲದಿದ್ದರೆ, ಭಾಷೆ, ಗ್ರಹಿಕೆಗಳು ದುರ್ಬಲವಾಗಿರುವುದು ಕತೆ ಪ್ರಕಟವಾದ ಮೇಲೆ ಹೊಳೆದರೆ ಕಸಿವಿಸಿಗೊಳ್ಳುತ್ತೇನೆ. ರಾಮಚಂದ್ರಶರ್ಮರ ಪದ್ಯವೊಂದರ ಸಾಲಿನಂತೆ, 'ತಡವಾಗಿ ಬಂದ ಬೆಳಕೇ' ಎಂದುಕೊಳ್ಳುತ್ತೇನೆ.

ಓದುಗರ ಪ್ರತಿಕ್ರಿಯೆಗಳನ್ನು ಕುರಿತು ಬರೆಯುತ್ತಿರುವ ಈ ಘಟ್ಟದಲ್ಲಿ, ನಾನು 'ಸುಧಾ' ವಾರಪತ್ರಿಕೆಯಲ್ಲಿ ಬರೆದ 'ಜ್ಞಾನಪೀಠದ ಹಾದಿಯಲ್ಲಿ' ಕತೆಗೆ ಬಂದ ನಾಲ್ಕು ವಿಭಿನ್ನ ಪ್ರತಿಕ್ರಿಯೆಗಳನ್ನು ದಾಖಲಿಸಬಹುದೆಂದು ಕಾಣುತ್ತದೆ. ಈ ಕತೆಯಲ್ಲಿ ಲೇಖಕನೊಬ್ಬನಿಗೆ ಜ್ಞಾನಪೀಠ ಬರುವ ಸುದ್ದಿ ಅಧಿಕೃತವಾಗಿ ಪ್ರಕಟವಾಗುವ ಹಿಂದಿನ ದಿನ ವಿಮರ್ಶಕನೊಬ್ಬ ಅವನ